ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಆ ಕಾರ್ಯಕ್ರಮ ಬಗ್ಗೆ ಎಲ್ಲರಿಗೂ ಆಮಂತ್ರಣವನ್ನು ಕಳುಹಿಸಿದ್ದೇನೆ. ಅಂಚೆಯಲ್ಲಿ ಮುಟ್ಟದೇ ಇದ್ದಕ್ಕಾಗಿ ದಯವಿಟ್ಟು ಕ್ಷಮಿಸಬೇಕು.ನಾನೇನು ಉದ್ದೇಶ ಪೂರ್ವಕವಾಗಿ ಮಾಡಿಲ್ಲ. ಎಲ್ಲರಿಗೂ ಕಳುಹಿಸಿ ನಿಮಗೆ ಏಕೆ ಕಳುಹಿಸುವುದಿಲ್ಲ.

ಅಧ್ಯಕ್ಷರು : ಅದು ಹಾಗಲ್ಲ. ನೀವು ಬೇರೆ ಯಾವ ಸದಸ್ಯರನ್ನಾದರೂ ಅಲಕ್ಷ್ಯ ಮಾಡಿ ಶ್ರೀ ಕುಂಬಳೆ ಸುಂದರರಾಯರು ಬಹಳ ವಿಶಿಷ್ಟವಾದಂತಹ ವ್ಯಕ್ತಿತ್ವವುಳ್ಳವರು ಅವರ ವಿಚಾರದಲ್ಲಿ ಹಾಗೇ ಮಾಡಬೇಡಿ. ನಿಮಗೇ ನಷ್ಟವಾಗುತ್ತದೆ. ಅವರ ಹತ್ತಿರ ತಿಳಿದುಕೊಳ್ಳುವುದು ಬಹಳ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಆ ರೀತಿ ಮಾಡಲಿಕ್ಕಿಲ್ಲ. ಅವರ ಬಗ್ಗೆ ನಾನು ಹಾಗೆ ಮಾಡಲಿಕ್ಕೆ ಸಾಧ್ಯವಿಲ್ಲ. ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ನಾನು ಯಾವಾಗಲೂ ಯಾವುದೇ ಕಾರ್ಯಕ್ರಮಕ್ಕೆ ಹೋಗಲಿ ತಿಳಿಸೇ ಹೋಗುತ್ತೇನೆ. ಅಂಚೆಯ ಪ್ರಾಬ್ಲಮ್ ಆಗಿರಬಹುದು. ಎಲ್ಲರಿಗೂ ಕಳುಹಿಸಿ ನಿಮಗೆ ಕಳುಹಿಸಿಲ್ಲ ಅಂದರೆ ಏನು?

(ಈ) ಮಂಡ್ಯ ಜಿಲ್ಲೆಯಲ್ಲಿ ಬೆಳೆದಿರುವ ಕಬ್ಬನ್ನು ಕಾರ್ಖಾನೆಗಳವರು ತೆಗೆದುಕೊಳ್ಳದೇ ಇರುವ ಬಗ್ಗೆ

+ ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಮಗೆ ಗೊತ್ತಿರುವ ಹಾಗೆ ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಪ್ರದೇಶದಲ್ಲಿ ನಾವು ಕಬ್ಬನ್ನು ಬೆಳೆಯುತ್ತಿದ್ದೇವೆ. ಈ ವರ್ಷ ಬಹಳ ಹೆಚ್ಚಿನ ಪ್ರದೇಶದಲ್ಲಿ ರೈತರು ಕಬ್ಬನ್ನು ಬೆಳೆದಿದ್ದಾರೆ. ಮೈಸೂರು ಜಿಲ್ಲೆಯಲ್ಲಿಯೂ ಸಹ ನಮ್ಮ ಅಕ್ಕ ಪಕ್ಕದ ಪ್ರದೇಶದಲ್ಲಿ ಹೆಚ್ಚಿನ ಕಬ್ಬನ್ನು ಬೆಳೆದು ಈ ವರ್ಷ ಈಗ ಇರತಕ್ಕಂತಹ ಕಾರ್ಖಾನೆಗಳು ಬೆಳೆದಿರುವ ಕಬ್ಬನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಏನು ಒಪ್ಪಿಗೆ ಕಬ್ಬು ಇದೆ, ಆ ಕಬ್ಬನ್ನು ಕೂಡ ಇದುವರೆಗೆ ಅರೆಯದೇ ಇರತಕ್ಕದ್ದನ್ನು ಮಾನ್ಯ ಸಕ್ಕರೆ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ನಾನ್ ಒಪ್ಪಿಗೆ ಕಬ್ಬು ಏನಿದೆ ಇದೆಲ್ಲ ಸೇರಿ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸುಮಾರು 35 ರಿಂದ 40 ಲಕ್ಷ ಟನ್ ಕಬ್ಬು ಹಾಗಿಯೇ ನಿಂತಿದೆ. ಸಾಮಾನ್ಯವಾಗಿ 11 ಅಥವಾ 12 ತಿಂಗಳಿನಲ್ಲಿ ಕಬ್ಬನ್ನು ಅರೆಯಬೇಕಾಗಿತ್ತು, ಆದರೆ 15 ತಿಂಗಳುಗಳ ವರೆಗೂ ಕಬ್ಬು ನಿಂತಿದೆ.

ಬಹಳ ತೊಂದರೆ ಇದೆ. ಈಗಿರತಕ್ಕ ಕಾರ್ಖಾನೆಗಳಲ್ಲಿ ಅರೆಯುವ ಅವಕಾಶ ಇಲ್ಲ. ಅದ್ದರಿಂದ ಸರ್ಕಾರ ತಕ್ಷಣ ಅಕ್ಕಪಕ್ಕದ ಕಾರ್ಖಾನೆಗಳು ಎಲ್ಲಿವೆ, ಅವು ನಮ್ಮ ರಾಜ್ಯದಲ್ಲಿರಬಹುದು ಅಥವಾ ಬೇರೆ ರಾಜ್ಯದಲ್ಲಿರಬಹುದು ಅವುಗಳ ಜೊತೆ ತಾವು ಮಾತನಾಡಿ ತಕ್ಷಣ ನಮ್ಮಲ್ಲಿ ಬೆಳೆದು ನಿಂತಿರತಕ್ಕ ಕಬ್ಬನ್ನು ಆ ಒಂದು ಕಾರ್ಖಾನೆಗಳಿಗೆ ಕಳುಹಿಸಿ ಅದನ್ನು ಅರೆಸತಕ್ಕ ವ್ಯವಸ್ಥೆ ಮಾಡಬೇಕು. ಈ ವ್ಯವಸ್ಥೆ ಈ ವರ್ಷ ಒಂದೇ ಅಲ್ಲ, ಅನೇಕ ವರ್ಷಗಳಿಂದ ನಡೆದು ಕೊಂಡು ಬಂದಿದೆ. ನಾವು ಸಹ ಹಿಂದೆ ಮಂತ್ರಿಗಳಾಗಿದ್ದಾಗ ನಮ್ಮ ಪಾಂಡವಪುರ ಭಾಗದಲ್ಲಿ ಕಬ್ಬು ಹೆಚ್ಚು ಬೆಳೆದಿದ್ದಾಗ ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆಗೆ ನಾವು ಇಲ್ಲಿಂದ ಕಬ್ಬನ್ನು ಕಳುಹಿಸಿದ್ದೆವು. ಅವರ ಜೊತೆ ಮಾತನಾಡಿ ಇಲ್ಲಿ ಹೆಚ್ಚಿಗೆ ಬೆಳೆಯತಕ್ಕ ಕಬ್ಬನ್ನು ಅಲ್ಲಿಗೆ ಕಳುಹಿಸಿದ್ದೆವು. ಇದು ಹೊಸ ಪದ್ಧತಿ ಏನಲ್ಲ. ಆದ್ದರಿಂದ ತಾವು ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. ನಮ್ಮ ಮಂಡ್ಯ ಜಿಲ್ಲೆ ಮತ್ತು ಅಕ್ಕಪಕ್ಕದ ಬನ್ನೂರು ಕ್ಷೇತ್ರದ ನಮ್ಮ ಕೃಷ್ಣಪ್ಪನವರ ಕ್ಷೇತ್ರದಲ್ಲಿ ಬಹಳ ಬೆಳೆದಿದ್ದಾರೆ. ಅತಿ ಶೀಘ್ರವಾಗಿ ಸಂಬಂಧಪಟ್ಟ ಕಾರ್ಖಾನೆಗಳ ಮ್ಯಾನೇಜ್‌ಮೆಂಟ್‌ನವರ ಜೊತೆ ಮಾತನಾಡಿ ಈ ನಾನ್ ಒಪ್ಪಿಗೆ ಕಬ್ಬು ಏನಿದೆ ಅದನ್ನು ಆದಷ್ಟು ಜಾಗ್ರತೆ ಅರೆಸಿಕೊಟ್ಟು

ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್ ಅವರು ಹೇಳಿದ ವಿಚಾರದ ಬಗ್ಗೆ ಆಗಲೇ ಹಲವಾರು ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ 3 ಸಕ್ಕರೆ ಕಾರ್ಖಾನೆಗಳು ಹಾಗೂ 3 ಖಂಡಸಾರಿ ಕಾರ್ಖಾನೆಗಳು, ಸುಮಾರು 4 ಸಾವಿರ ಕಬ್ಬಿನ ಗಾಣಗಳು ಇದ್ದರೂ ಸಹ ನಮ್ಮ ಜಿಲ್ಲೆಯಲ್ಲಿ ಬೆಳೆಯತಕ್ಕ ಕಬ್ಬು 35 ರಿಂದ 40 ಲಕ್ಷ ಟನ್‌ನಷ್ಟು ಕಬ್ಬು ಇವತ್ತು ಬೆಳೆದು ನಿಂತಿದೆ. ಇವತ್ತು ಕಬ್ಬು ಬೆಳೆದವರ ಸ್ಥಿತಿ ಏನಾಗಿದೆ ಎಂದರೆ ರಸ ಕೊಡತಕ್ಕ ಕಬ್ಬು ಕಸಕ್ಕಿಂತ ಕಡೆಯಾಗಿದೆ. ಬೆಲ್ಲಕ್ಕೆ ರೇಟಿಲ್ಲ ಕಾರ್ಖಾನೆಗಳು ನಿಗದಿತ ಪ್ರಮಾಣದಲ್ಲಿ ಕಬ್ಬನ್ನು ಅರೆಯುತ್ತಿಲ್ಲ. ಹಾಗಾಗಿ ಇವತ್ತು ತಮಗೆ ಗೊತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಎದ್ದಿರತಕ್ಕ ವಿವಾದ ಕಾವೇರಿ ನೀರಿನ ಬಗ್ಗೆ ಏನಿದೆ ಪ್ರಾಯಶಃ ಅದಕ್ಕಿಂತ ಈ ಕಬ್ಬಿನದು ಜಾಸ್ತಿಯಾಗಿದೆ. ಇದರ ಬಗ್ಗೆ ಸರ್ಕಾರ ತೀವ್ರ ಕ್ರಮ ತೆಗೆದುಕೊಂಡು ಅಕ್ಕಪಕ್ಕದ ಕಾರ್ಖಾನೆಗಳಿಗೆ ರವಾನಿಸತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಜನತಾ ದರ್ಶನಕ್ಕೆ ಬಂದಾಗಿನಿಂದಲೂ ಈವರೆಗೆ ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ಹಿಂದಿನ ಸರ್ಕಾರದಲ್ಲಿ ಕೈಗಾರಿಕಾ ಸಚಿವರಾಗಿದ್ದಾಗ ಏನು ಖಂಡಸಾರಿ ಕಾರ್ಖಾನೆಗಳಿಗೆ ಕಬ್ಬಿನ ಕಾರ್ಖಾನೆ ಪ್ರಾರಂಭವಾದ ಸುಮಾರು 45 ರಿಂದ 60 ದಿನಗಳವರೆಗೆ ನಿರ್ಬಂಧ ಇತ್ತು. ಅನುಮತಿ ಕೊಡುತ್ತಿರಲಿಲ್ಲ. ಅದನ್ನು ಸಡಿಲಗೊಳಿಸಿ ಹಿಂದೊಮ್ಮೆ ಅಕ್ಕಪಕ್ಕದ ಕಾರ್ಖಾನೆಗಳಿಗೆ ಕಬ್ಬನ್ನು ಸರಬರಾಜು ಮಾಡತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಮಂಡ್ಯ ಜಿಲ್ಲೆಯಲ್ಲಿ ಬೆಳೆದು ಹೆಚ್ಚಾಗಿ ಇರತಕ್ಕ ಕಬ್ಬನ್ನು ಅಕ್ಕಪಕ್ಕದ ಕಾರ್ಖಾನೆಗಳಿಗೆ ತಾವು ಅನುಮತಿ ಕೊಟ್ಟು ಹೊರಗಡೆ ಕಳುಹಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಾಗೆಯೇ ಖಂಡಸಾರಿಯವರಿಗೆ ನಾವು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಮ್ಮ ಜಿಲ್ಲಾ ಶಾಸಕರುಗಳು ಒಂದು ಸಭೆಯನ್ನು ಕರೆದಿದ್ದೆವು. ಹಿಂದೆ, ನಮ್ಮ ಹಿಂದೆ ಅವರು ಬೀಳುತ್ತಿದ್ದರು, ಇವತ್ತು ಅವರ ಹಿಂದೆ ನಾವು ಬೀಳುವ ಹಾಗೆ ಆಗಿದೆ. ಮೀಟಿಂಗ್‌ಗೆ ಬರಲಿಲ್ಲ ಅವರು. ಕಾರಣವೇನೆಂದರೆ ಕಬ್ಬಿಗೆ ಏನು ಬೆಲೆ ನಿಗದಿ ಮಾಡಿದ್ದಾರೆ ಅದೇ ರೀತಿ ನಮ್ಮನ್ನು ನಿಗದಿ ಮಾಡುತ್ತಾರೆಂದು ಅಂಜಿಕೊಂಡು ದೂರ ಸರಿದಿದ್ದಾರೆ ಸರ್ಕಾರ ಅವರನ್ನು ಕೂಡ ಕರೆದು ಒಂದು ಬೆಲೆ ನಿಗದಿ ಮಾಡಿ ಖಂಡಸಾರಿ ಕಾರ್ಖಾನೆ ಮತ್ತು ಅಕ್ಕಪಕ್ಕದಲ್ಲಿ ರಾಜ್ಯದಲ್ಲಿರತಕ್ಕ ಕಾರ್ಖಾನೆಗಳಿಗೆ ಕಬ್ಬು ಕೊಡದಿದ್ದರೆ ಅದು ಬೀದಿಯಲ್ಲಿ ಕಸಕ್ಕಿಂತ ಕಡೆಯಾಗುತ್ತದೆ. ಈಗ ಅಲ್ಲಿನ ರೈತರು ಬಂದು ಚಳುವಳಿ ಮಾಡುವುದಾಗಿ ಪತ್ರ ಬರೆದಿದ್ದಾರೆ. ಕಬ್ಬನ್ನು ಕಡಿದು ರಸ್ತೆಗೆ ಹಾಕುತ್ತೇವೆಂದು ಹೇಳಿದ್ದಾರೆ. ಆದುದರಿಂದ ಇದು ತೀವ್ರ ತರವಾದ ಸಮಸ್ಯೆ. ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

+ ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀ ಶಿವಕುಮಾರ್ ಮತ್ತು ಶ್ರೀ ಸೋಮಶೇಖರ್‌ರವರು ಈಗಾಗಲೇ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ತಮಗೆ ಗೊತ್ತಿರುವ ಹಾಗೆ ಮಂಡ್ಯ ಜಿಲ್ಲೆಯಲ್ಲಿ ಅತೀ ಹೆಚ್ಚಿನ ರೀತಿಯಲ್ಲಿ ಕಬ್ಬನ್ನು ಬೆಳೆಯತಕ್ಕದ್ದು ತಮಗೂ ಗೊತ್ತಿರತಕ್ಕ ವಿಚಾರ ಮತ್ತು ಸರ್ಕಾರಕ್ಕೂ ಗೊತ್ತಿರತಕ್ಕ ವಿಚಾರ. ಈಗ ಏನಾಗಿದೆ ಎಂದರೆ, ಮೊದಲು 3, ಖಂಡಸಾರಿ ಕಾರ್ಖಾನೆಗಳು ಪ್ರಾರಂಭವಾಗಿ ಅವರು ಆ ಭಾಗದಲ್ಲಿರತಕ್ಕ ರೈತರಿಂದ ಒಟ್ಟಾಗಿ ಕಬ್ಬು ತೆಗೆದುಕೊಳ್ಳತಕ್ಕದ್ದು ಮೊದಲು ನಡೆಯಿತು. ಇತ್ತೀಚೆಗೆ ನಾಗಮಂಗಲ ಪಾಂಡವಪುರ ಮತ್ತು ನಮ್ಮ

ಕೆ.ಆರ್. ಪೇಟೆ ಭಾಗದಲ್ಲಿ ಬೆಳೆಯತಕ್ಕ ಕಬ್ಬನ್ನು ಯಾವ ಕಾರ್ಖಾನೆಯವರೂ ಮುಟ್ಟುವುದಿಲ್ಲ. ನಾನ್ ಒಪ್ಪಿಗೆ ಕಬ್ಬು ಇವತ್ತು 11-12 ತಿಂಗಳೊಳಗೆ ಅರೆಯದಿದ್ದರೆ ಇಳುವರಿ ಕಡಿಮೆ ಬರುತ್ತದೆ. ಇಳುವರಿ ಕಡಿಮೆ ಬಂದಮೇಲೆ ರಸ ಆಗತಕ್ಕ ಕಬ್ಬು ಬೆಂಕಿಗೆ ಹಾಕುವುದಕ್ಕೆ ಕೂಡ ಉಪಯೋಗವಾಗುವುದಿಲ್ಲ, ಆಪರಿಸ್ಥಿತಿ ಉದ್ಭವವಾಗುತ್ತದೆ. ಮಂಡ್ಯ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಜನತಾದರ್ಶನಕ್ಕೆ ಬಂದಾಗ ಪ್ರತ್ಯೇಕವಾಗಿ ನಾವೆಲ್ಲ ಶಾಸಕರು ಭೇಟಿ ಮಾಡಿ ಈ ಒಂದು ಕಬ್ಬಿಗೆ ವ್ಯವಸ್ಥೆ ಮಾಡಲೇಬೇಕೆಂಬ ವಿಚಾರವನ್ನು ಅರರ ಮುಂದಿಟ್ಟಿದ್ದೇವೆ. ಸಕ್ಕರೆ ಮಂತ್ರಿಗಳು ಮಂಡ್ಯಕ್ಕೆ ಬಂದಾಗ ಸಹ ಎಲ್ಲ ಮುಖಂಡರು ಸಕ್ಕರೆ ಮಂತ್ರಿಗಳನ್ನು ಭೇಟಿ ಮಾಡಿ ಶೀಘ್ರವಾಗಿ ಪರಿಹಾರ ಮಾಡಬೇಕೆಂದು ಹೇಳಿದ್ದೇವೆ. ಇದು ಒಂದು ಕಡೆ. ಇದು ಒಂದು ವರ್ಷದ ವಿಚಾರ ಅಲ್ಲ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿಗೆ ಕರ್ನಾಟಕ ಸರ್ಕಾರ ಈಗಾಗಲೇ ಲೆಟರ್ ಆಫ್ ಇಂಡೆಂಟ್ ಕೊಟ್ಟು ತಾವು ಮಂಜೂರಾತಿ ಕೊಟ್ಟಿದ್ದೀರಿ. ಈ ಬಗ್ಗೆ ಕೇಂದ್ರದಲ್ಲಿ ಹೋರಾಟ ಮಾಡಿ ಶೀಘ್ರದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ತೆಗೆಸಿದರೆ ಎಲ್ಲಾ ಸಮಸ್ಯೆಗಳು ಏಕ ಕಾಲದಲ್ಲಿ ಪರಿಹಾರವಾಗುತ್ತವೆ ದಯವಿಟ್ಟು ಸರ್ಕಾರ ಶೀಘ್ರವಾಗಿ ಒಟ್ಟಿನಲ್ಲಿ ನಮ್ಮ ಕಬ್ಬನ್ನು ತೆಗೆದು ಅರೆಯತಕ್ಕ ಕೆಲಸವನ್ನು ಬೇರೆ ಮಾಡಿ. ಯಾವುದಾದರೂ ಕಾರ್ಖಾನೆಗೆ ಕೊಡಿ. ಉದಾಹರಣೆಗೆ ಹಾಸನದಲ್ಲಿ ಏನು ಮಾಡಿದ್ದಾರೆಂದರೆ ಹಿರಿಯೂರು ಕಾರ್ಖಾನೆಯವರು ಬಂದು ಅಲ್ಲಿ ಆಫೀಸ್ ಓಪನ್ ಮಾಡಿ ಏನು ಹೇಮಾವತಿ ಸಕ್ಕರೆ ಕಾರ್ಖಾನೆಯ ಏರಿಯಾದಲ್ಲಿ ಹೆಚ್ಚು ಕಬ್ಬು ಇದೆಯೋ ಆ ಕಬ್ಬನ್ನು ತಮ್ಮ ಕಾರ್ಖಾನೆಗೆ ತೆಗೆದುಕೊಂಡು ಹೋಗುತ್ತಿರುವುದರಿಂದ ಆ ಭಾಗದ ಜನರಿಗೆ ಪ್ರಯೋಜನವಾಗುತ್ತಿದೆ. ಯಾವುದೇ ರೀತಿಯಿಂದಲಾದರೂ ಸಹಾಯ ಮಾಡಲು ಸರ್ಕಾರ ಮುಂದೆ ಬಂದು, ರೈತರ ಕಬ್ಬು ತೆಗೆದುಕೊಂಡು ರೈತರ ಪಾಲಿಗೆ ಏನು ಸಂಕಷ್ಟ ಬಂದಿದೆ ಅದನ್ನು ಬಗೆಹರಿಸಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿಯೂ ಕೂಡ 3 ಸಕ್ಕರೆ ಕಾರ್ಖಾನೆಗಳು ಇದ್ದು ಈಗಾಗಲೇ ಎರಡು ಕಾರ್ಖಾನೆಗಳು ಪ್ರಾರಂಭವಾಗಿವೆ. ಇನ್ನು ಉಳಿದ ಮಹದೇಶ್ವರ ಸಕ್ಕರೆ ಕಾರ್ಖಾನೆ ಕೂಡ ಕಳೆದ ಸಾರಿ ಜುಲೈ ತಿಂಗಳಲ್ಲಿ ಪ್ರಾರಂಭವಾಗಬೇಕಾದುದು ಇಲ್ಲಿಯವರೆಗೆ ಪ್ರಾರಂಭ ಆಗಿಲ್ಲ. ನಮ್ಮ ಭಾಗದ ರೈತರು ಏನಿದ್ದಾರೆ ಅವರು ಇದನ್ನು ನಂಬಿಕೊಂಡು ಕಬ್ಬನ್ನು ಬೆಳೆದು ಈಗಾಗಲೇ 16 ತಿಂಗಳಾಗಿದೆ. ಮಂತ್ರಿಗಳು ಈಗಾಗಲೇ ಹೇಳಿದ ಹಾಗೆ ಒಂದು ಕೋಟಿ ಒಂಭತ್ತು ಲಕ್ಷ ರೂಪಾಯಿಗಳನ್ನು ಇನ್ನೂ ಬಾಕಿ ಕೊಡುವಂಥ ಒಂದು ಪರಿಸ್ಥಿತಿಯಲ್ಲಿ ಸಕ್ಕರೆ ಕಾರ್ಖಾನೆ ಇದ್ದು, ಈ ಒಂದು ಸಕ್ಕರೆ ಕಾರ್ಖಾನೆ ನಿಯಮದಂತೆ ಸಕ್ಕರೆ ಕಾರ್ಖಾನೆಗೆ ಹೊಡೆದಂಥ ಕಬ್ಬಿನ ಬೆಲೆಯನ್ನು 14 ದಿನಗಳೊಳಗೆ ಮಾಲೀಕರು ರೈತರಿಗೆ ಪಾವತಿ ಮಾಡಬೇಕು. ಆದರೆ ಈ ಸಕ್ಕರೆ ಕಾರ್ಖಾನೆಗಳು ವರ್ಷಾನುಗಟ್ಟಲೆಯಾದರೂ ಹಣ ಪಾವತಿ ಮಾಡದೆ ಬಹಳ ತೊಂದರೆಯಾಗಿದೆ. ಅಂದರೆ ಕಾರ್ಖಾನೆಗಳು ನಮಗೆ ಏನು ಬಾಕಿ ಕೊಡಬೇಕು ಅದಕ್ಕೆ ಬಡ್ಡಿ ಸಹ ಕೊಡುತ್ತಿಲ್ಲ, ಬಡ್ಡಿ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ರೈತರು ಬ್ಯಾಂಕಿನಿಂದ ಸಾಲ ಪಡೆದು ಬ್ಯಾಂಕಿಗೆ ಹಣ ಕಟ್ಟದಿದ್ದರೆ ಯಾವ ಬ್ಯಾಂಕೂ ಸುಮ್ಮನಿರುವುದಿಲ್ಲ. ಈ ಸಾರಿ ಬೆಳೆದ ಕಬ್ಬು ಜುಲೈನಲ್ಲಿ ಪ್ರಾರಂಭವಾಗಬೇಕಾದುದು ಇನ್ನೂ ಅದರ ಅರೆಯುವ ಕೆಲಸ ಪ್ರಾರಂಭವಾಗದೆ ಕಬ್ಬು ಹೇರಳವಾಗಿ ನಮ್ಮ ತಾಲ್ಲೂಕಿನಲ್ಲಿದೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಕಬ್ಬು, ಕ್ಷೇತ್ರದಲ್ಲಿರತಕ್ಕ ಕಬ್ಬು ಏನಿದೆ ಅದರ ಇಳುವರಿ ಮತ್ತು ಮಂಡ್ಯ ಮೈಸೂರಿನಲ್ಲಿರತಕ್ಕ ಇಳುವರಿ ನೋಡಿದರೆ $9\frac{1}{2} - 10$ ಪಾಯಿಂಟಿಗೆ ಬರುತ್ತದೆ.

ಮಹದೇಶ್ವರ ಸಕ್ಕರೆ ಕಾರ್ಖಾನೆಯವರದ್ದು 8-5 ಬರುತ್ತದೆಂಬ ಒಂದು ತಪ್ಪು ಕಲ್ಪನೆ ಮಾಡಿಕೊಂಡು ಕೆಲಸ ಮಾಡುತ್ತಾರೇನೋ ಗೊತ್ತಿಲ್ಲ. ನಮ್ಮ ಭಾಗದಲ್ಲಿರತಕ್ಕ ಕಬ್ಬಿನ ಇಳುವರಿ ಏನಿದೆ ಅದು $9\frac{1}{2}-10$ ಬರುತ್ತದೆ. ಆದರೆ ಇವರು ಕೇವಲ ಸರ್ಕಾರ ನಿಗದಿ ಮಾಡಿದ 580 ರೂಪಾಯಿ ಬೆಲೆಗೆ ಮಾತ್ರ ಕೊಡುತ್ತೇವೆಂದು ಆ ಭಾಗದ ರೈತರು ಬೆಳೆದ ಕಬ್ಬು ಏನಿದೆ ಅದಕ್ಕೆ ಕಡಿಮೆ ಬೆಲೆ ಕೊಟ್ಟು ಶೋಷಣೆ ಮಾಡತಕ್ಕದ್ದು ತಪ್ಪಬೇಕು. ಮತ್ತು ಈ ಭಾಗದಲ್ಲಿರತಕ್ಕ ನಮ್ಮ ಜಿಲ್ಲೆಯಲ್ಲಿರತಕ್ಕ ರೈತರಿಗೆ 710 ರೂಪಾಯಿಗಳನ್ನು ಬೇರೆ ಕಾರ್ಖಾನೆಗಳವರು ಏನು ಕೊಡುತ್ತಿದ್ದಾರೆ ಅದೇ ರೀತಿ ವ್ಯವಸ್ಥೆಯನ್ನು ನಮ್ಮ ಕಬ್ಬಿಗೆ ಕೊಡಬೇಕೆಂದು ಮನವಿ ಮಾಡುತ್ತಾ ದಿನೇದಿನೇ ಇದು ಹೆಚ್ಚುವುದಾದರೇ ಈ ಭಾಗದ ಜನ ನಿಜವಾಗಿ ಬಹಳ ಸಂಕಷ್ಟಕ್ಕೆ ಒಳಗಾಗುತ್ತಾರೆ. ಈಗ ಆ ಭಾಗದ ಜನರು ಕಬ್ಬನ್ನು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ದಯವಿಟ್ಟು ಈ ಭಾಗದಲ್ಲಿ ಎಲ್ಲಾ ಕಾರ್ಯ ಪ್ರಾರಂಭ ಮಾಡಬೇಕು, ಹೆಚ್ಚುವರಿ ಕಬ್ಬನ್ನು ಹೊರ ರಾಜ್ಯಕ್ಕೆ ಸಾಗಿಸಿ ರೈತರ ಸಂಕಷ್ಟಕ್ಕೆ ಸರ್ಕಾರ ಮುಂದೆ ಬರಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸಹೋದ್ಯೋಗಿಗಳು 7-8 ಜನ ತಿಳಿಸಿದ್ದಾರೆ. ಅದೇ ರೀತಿ ನನ್ನ ಕ್ಷೇತ್ರವಾದ ಶ್ರೀರಂಗಪಟ್ಟಣದಲ್ಲೂ ಕೂಡ ಬಹಳಷ್ಟು ಜನ 15-20 ಲಕ್ಷ ಟನ್ ಕಬ್ಬು ಬೆಳೆದಿದ್ದಾರೆ. ಬೆಳಿಗ್ಗೆ ಎದ್ದ ತಕ್ಷಣ ಫೋನ್ ಏನೆಂದರೆ, ಅಕ್ಕ ಕಬ್ಬು ಇದೆ, ಏನಾದರೂ ಮಾಡಿ, ಯಾವುದಾದರೂ ಕಾರ್ಖಾನೆಗೆ ಕೊಡಿಸಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ನಾನು ಸಕ್ಕರೆ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ ಮತ್ತು ಮೈಸೂರು, ಮಂಡ್ಯ ಕಾರ್ಖಾನೆಗಳವರ ಕಡೆ ವಿಚಾರಿಸಿದೆ. ಆದರೆ ಎಲ್ಲರೂ ಹೇಗಾಗುತ್ತದೆ ನೋಡೋಣ, ಸರ್ಕಾರ ಯಾವ ನಿಲುವು ತೆಗೆದುಕೊಳ್ಳುತ್ತದೆಂದು ಸರ್ಕಾರದ ಬಗ್ಗೆ ಹೇಳಿದ್ದಾರೆ ಆದುದರಿಂದ ದಯವಿಟ್ಟು ಖಂಡಸಾರಿ ಕಾರ್ಖಾನೆಗಳನ್ನು ತೆಗೆದರೆ ಅಲ್ಪಸ್ವಲ್ಪ ಕಬ್ಬು ಹಾಕಿದವರಿಗೆ ಅನುಕೂಲವಾಗುತ್ತದೆ. ಕೆಲವರು ಹತ್ತು ಗುಂಟೆಯಲ್ಲಿ ಕೂಡ ಕಬ್ಬು ಹಾಕಿದ್ದಾರೆ. ಅವರು ಸಾಲಸೋಲ ಮಾಡಿ ಹಾಕಿ ಏನು ಮಾಡುವುದು ಇದನ್ನು ಎಂದು ಬಹಳಷ್ಟು ತೊಂದರೆ ಅಂದರೆ ಅವರಿಗೆ ನಿದ್ದೆನೇ ಬರುತ್ತಿಲ್ಲ. ಬೆಳೆದ ಕಬ್ಬನ್ನು ಏನು ಮಾಡುವುದು ಎಂದು ಬಹಳಷ್ಟು ತೊಂದರೆ ಇರುವುದರಿಂದ ಕೂಡಲೇ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಮತ್ತೆ ನಂಜನಗೂಡಿನಲ್ಲಿ ಬಣ್ಣಾರಿಯಮ್ಮನ್ ಕಾರ್ಖಾನೆಯವರು ಹೋದ ಸಾರಿ ಕಬ್ಬು ತೆಗೆದುಕೊಂಡಿದ್ದಾರೆ ಮತ್ತು ಬಾಂಡ್ ಕೂಡ ಮಾಡಿಕೊಂಡಿದ್ದಾರೆ. ಆದರೆ ಈ ಸಾರಿ ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಮೈಸೂರು ಜಿಲ್ಲೆಯವರದ್ದು ತೆಗೆದುಕೊಳ್ಳಬೇಕೆಂದಿದ್ದೇವೆಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಗಮನ ಹರಿಸಬೇಕು. ಹೋದ ಸಾರಿ ತೆಗೆದುಕೊಂಡ ಹಾಗೆ ಈ ಸಾರಿಯೂ ಬಣ್ಣಾರಿಯಮ್ಮನ್ ಅವರು ಕಬ್ಬನ್ನು ತೆಗೆದುಕೊಂಡರೆ ಬಹಳಷ್ಟು ಕಡಿಮೆ ಸಾಧಿಸಿದ ಹಾಗೆ ಆಗುತ್ತದೆ. ಈಗಾಗಲೇ 10-12 ತಿಂಗಳಾಗಿರುವುದರಿಂದ ಇನ್ನೂ ಜಾಸ್ತಿ ಅವರಿಗೆ ಅವಕಾಶ ಕೊಟ್ಟರೆ ಕಬ್ಬು ಸತ್ತ ಕಬ್ಬು ಆಗುತ್ತದೆ. ಅದನ್ನು ಒಲೆಗೆ ಇಟ್ಟುಕೊಳ್ಳುವುದಕ್ಕೆ ಒಂದಕ್ಕೆ ಮಾತ್ರ ಉಪಯೋಗವಾಗುತ್ತದೆ. ಆದ್ದರಿಂದ ಕೂಡಲೇ ಈ ಬಗ್ಗೆ ಗಮನ ಹರಿಸಿ ಸರ್ಕಾರದವರು ರೈತಾಪಿ ಜನಗಳಿಗೆ ಅವಕಾಶ ಮಾಡಿ ಬೇಗ ಕಬ್ಬು ಅರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎ. ರಾಮದಾಸ್ : ಮಾನ್ಯ ನಾಗೇಗೌಡರು ಮಾತನಾಡುವುದಕ್ಕೆ ಮುಂಚೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಸದಸ್ಯರಾದ ಮಾನ್ಯ ನಾಗೇಗೌಡರನ್ನು ಸರ್ಕಾರ ಅಸಿಸ್ಟೆಂಟ್ ಇಂಜಿನಿಯರ್ ಆಗಿ ನೀರಾವರಿ ಇಲಾಖೆಗೆ ಪೋಸ್ಟಿಂಗ್ಸ್

ಮಾಡಿದ್ದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯಾ? ಗೌರವಾನ್ವಿತ ಸದಸ್ಯರಾದ ನಾಗೇಗೌಡರು ಇಂಜಿನಿಯರ್ ಆಗಿ ಅಲ್ಲಿಗೆ ಹೋಗಿದ್ದಾರೋ ಅಥವಾ ನಮ್ಮ ಜೊತೆಯಲ್ಲಿ ಸದಸ್ಯರಾಗಿದ್ದಾರೋ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಯಾವುದೋ, ಎಲ್ಲೋ ಟೈಪಿಂಗ್ ಎರರ್ ಇರಬಹುದು. ಅದನ್ನೆಲ್ಲಾ ಏತಕ್ಕೆ ಹೇಳುತ್ತೀರಿ?

ಶ್ರೀ ಎ. ರಾಮದಾಸ್ : ಆರ್ಡರ್ ತಮ್ಮ ಕೈಗೆ ಕಳುಹಿಸಿಕೊಡುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಕಳುಹಿಸಿಕೊಡಿ. ಆಗಿದ್ದರೆ ಅವರೇ ಪುಣ್ಯಾತ್ಮರು ಈ ಕಾಟ ಎಲ್ಲಾ ತಪ್ಪುತ್ತದೆ.

ಶ್ರೀ ಎ. ರಾಮದಾಸ್ : ಪುಟ್ಟಯ್ಯ ಎನ್ನುವಂಥ ಅಸಿಸ್ಟೆಂಟ್ ಇಂಜಿನಿಯರ್ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲಸ ಮಾಡುತ್ತಿದ್ದರು. ಅವರನ್ನು ನೀರಾವರಿ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿ ಎಂದು ಅಪ್ಲಿಕೇಷನ್ ಕೊಟ್ಟಿದ್ದರು. ಪುಟ್ಟಯ್ಯನವರನ್ನು ಟ್ರಾನ್ಸ್‌ಫರ್ ಮಾಡುವ ಬದಲು ಸನ್ಮಾನ್ಯ ಸದಸ್ಯರಾದ ನಾಗೇಗೌಡರನ್ನು ಟ್ರಾನ್ಸ್‌ಫರ್ ಮಾಡಿರುವ ಆರ್ಡರ್ ಇಲ್ಲಿದೆ. ಇದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೆ. ಸರ್ಕಾರ ಸನ್ಮಾನ್ಯ ಸದಸ್ಯರನ್ನು ಟ್ರಾನ್ಸ್‌ಫರ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ.

ಶ್ರೀ ಬಿ. ಸತ್ಯನಾರಾಯಣ : ನನ್ನದೊಂದು ಮಾತಿದೆ ಇದರಲ್ಲಿ. ಕಬ್ಬಿನ ಬಗ್ಗೆ ಹೇಳಬೇಕಾಗಿದೆ. ಅವಕಾಶ ಕೊಡಬೇಕು ಸನ್ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಶಿರಾಕ್ಕೂ ಮಂಡ್ಯಕ್ಕೂ ಏನು ಸಂಬಂಧ? ಮೊದಲೇ ಬಂದು ಕೇಳಬೇಕು ನೀವು. ರೂಲಿಂಗ್ ಪಾರ್ಟಿಯವರು ಸುಖವಾಗಿರುತ್ತೀರಿ ನೀವು. ಪದ್ಧತಿ ಎಲ್ಲಾ ಮರೆತುಬಿಟ್ಟಿದ್ದೀರಿ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ನಾನು ಹಿರಿಯೂರು ಫ್ಯಾಕ್ಟರಿ ಬಗ್ಗೆ ಎರಡು ಮಾತು ಹೇಳುತ್ತಿದ್ದೆ.

ಅಧ್ಯಕ್ಷರು : ಯಾವಾಗ ಅಂದರೆ ಆಗ ಯಾವ ಫ್ಯಾಕ್ಟರಿ ಅಂದರೆ ಆ ಫ್ಯಾಕ್ಟರಿ ಬಗ್ಗೆ ಹೇಳುವುದಕ್ಕೆ ಏನಿದೆ? ದಯಮಾಡಿ ಕುಳಿತುಕೊಳ್ಳಿ. ಮೊದಲೇ ನೀವು ಬಂದು ಮಾತನಾಡಬೇಕು ನನ್ನ ಹತ್ತಿರ. ಬನ್ನಿ ಇದೆಲ್ಲಾ ಹೇಗೆ ಮಾಡಬೇಕು ಅಂತ ಅದನ್ನೆಲ್ಲ ಹೇಳಿಕೊಡುತ್ತೇನೆ.

+ ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸ್ನೇಹಿತರಾದ ಸೋಮಶೇಖರ್ ಮತ್ತು ಇತರ ಸ್ನೇಹಿತರು ಬಹಳ ಗಂಭೀರವಾದಂಥ ನಮ್ಮ ಜಿಲ್ಲೆ ಮತ್ತು ಅಕ್ಕಪಕ್ಕದ ರೈತರ ಸಮಸ್ಯೆಯನ್ನು ಪ್ರಸ್ತಾಪಮಾಡಿದ್ದಾರೆ. ನಾವು ಒಂದಾನೊಂದು ಕಾಲದಲ್ಲಿ ನಮ್ಮ ಕಾರ್ಖಾನೆಗೆ ಕಬ್ಬು ಇಲ್ಲದಿರುವ ದಿನಗಳನ್ನು ನೋಡಿದ್ದೆವು. 1975ನೇ ಇಸವಿಯಲ್ಲಿ ನಾವೆಲ್ಲಾ ಕಂಪೆನಿ ಅಧ್ಯಕ್ಷರಾಗಿದ್ದಾಗ ಕಾರ್ಖಾನೆಗೆ ಕಬ್ಬು ಇಲ್ಲದೆ ಬೇರೆಕಡೆಯಿಂದ ಕಬ್ಬನ್ನು ತರಿಸಿಕೊಂಡು ಕಾರ್ಖಾನೆಯನ್ನು ನಡೆಸುತ್ತಿದ್ದೆವು. ಆದಾದ ಮೇಲೆ 1975-76ರಲ್ಲಿ ಈ ಬೌಂಡರಿ ಮಾರ್ಕ್ ಮಾಡತಕ್ಕ ಪದ್ಧತಿ ಬಂತು. ನಮ್ಮ ಸಿದ್ದನಗೌಡರಿಗೆ ಹೇಳುತ್ತಿದ್ದೇನೆ ಬೌಂಡರಿ ನಿರ್ಬಂಧ ನಿರ್ಬಂಧ ಏನು ಮಾಡಿದ್ದಾರೆ ಆ ನಿರ್ಬಂಧ ತೆಗೆದು ಹಾಕಬೇಕು. ಆ ನೋಟಿಫೈಡ್ ನಿರ್ಬಂಧ ಏನು ಮಾಡಿದ್ದೀರಿ ಇಷ್ಟಿಷ್ಟು ಕಾರ್ಖಾನೆಗೆ ಇಷ್ಟಿಷ್ಟು ಎಕರೆ ಎಂದು ಅದನ್ನು ಆ ಕಾರ್ಖಾನೆಗಳಿಗೆ ಅನುಕೂಲವಾಗುವ ಹಾಗೆ ಮಾಡಿಕೊಂಡಿದ್ದೀರಿ? ಆವತ್ತು ಮಾಡಿದ್ದಕ್ಕೂ ಇವತ್ತು ಮಾಡಿದ್ದಕ್ಕೂ ವ್ಯತ್ಯಾಸ ಇದೆ. ಆವತ್ತು ಮಾಡಿರುವುದು ಕಾರ್ಖಾನೆಗೆ ಕಬ್ಬು

ಸಾಕಾಗುವುದಿಲ್ಲ ಎಂದು ಹೊಸದಾಗಿ ಡೈರೆಕ್ಟೊರೇಟ್ ಮಾಡಿ, ಏರಿಯಾ ನೋಟಿಫೈ ಮಾಡಿ, 10 ಸಾವಿರ ಎಕರೆ, 8 ಸಾವಿರ ಎಕರೆ, 9 ಸಾವಿರ ಎಕರೆ ಒಂದು ಕಾರ್ಖಾನೆಗೆ ಇರಬೇಕು ಎಂದು ಆ ಹಿನ್ನೆಲೆಯಲ್ಲಿ ಆ ನಿರ್ಬಂಧವನ್ನು ಮಾಡಿದ್ದರು. ಈಗ ಸಾಗಾಣಿಕೆ ನಿರ್ಬಂಧ ಮಾಡಿರುವುದನ್ನು ಖಂಡಿತ ನಮ್ಮ ಸರ್ಕಾರ ತೆಗೆಯಬೇಕು. ತೆಗೆಯದೇ ಹೋದರೆ ಈ ಕಾರ್ಖಾನೆಯವರು ನಿಮ್ಮ ಕೈಗೆ ಬರುವುದಿಲ್ಲ. ಖಾಸಗಿ ಸಹಕಾರ ಸಕ್ಕರೆ ಕಾರ್ಖಾನೆ ಮಾಲೀಕರುಗಳೇನಿದ್ದಾರೆ ಅವರ ಧೋರಣೆಯನ್ನು ನಮ್ಮ ಸರ್ಕಾರ ಬಹಳ ಕಟ್ಟುನಿಟ್ಟಿನಿಂದ ಸರಿಪಡಿಸಬೇಕು. ಕಾರಣ ಏನೆಂದರೆ ಇವತ್ತು ರೈತರು ಕಬ್ಬು ಬೆಳೆದಿದ್ದಾರೆ. 15 ತಿಂಗಳು ಎಂದು ಮಾನ್ಯ ಸೋಮಶೇಖರ್ ಅವರು ಹೇಳಿದರು. 18 ತಿಂಗಳು, 20 ತಿಂಗಳಿಂದ ಕಬ್ಬು ಬೆಳೆದು ನಿಂತಿರುವುದು ಇದೆ. ಅದನ್ನು ಬೇಕಾದರೆ ತೋರಿಸುತ್ತೇನೆ.

ನಾವು ಎಲ್ಲೂ ಮುಖ ತೋರಿಸುವುದಕ್ಕಾಗುವುದಿಲ್ಲ. ಇವತ್ತು ಕಾರ್ಖಾನೆಯ ಮಾಲೀಕರಿಗೆ ಏನಾಗಿದೆ? ಕಬ್ಬು ಜಾಸ್ತಿ ಇರುವುದರಿಂದ ಕಬ್ಬು ಕಾರ್ಖಾನೆಗೆ ಹೊಡೆಯಲೇಬೇಕು ಎಂಬ ದೃಷ್ಟಿಯಿಂದ ರೈತರು ವಿಧಿಯಿಲ್ಲ ಎಂದು ತಿಳಿದುಕೊಂಡು ಹೋದರೆ ಕಾರ್ಖಾನೆಯವರು ಕೈಗೆ ಸಿಗುವುದಿಲ್ಲ. ಚಾಮುಂಡೇಶ್ವರಿ ಕಾರ್ಖಾನೆಯವರನ್ನು ಮುಖ್ಯಮಂತ್ರಿಗಳು ಕರೆಸಿ ನೀವು ಶುರು ಮಾಡಬೇಕು, ಇಷ್ಟೇ ರೇಟ್ ಕೊಡಬೇಕು ಎಂದು ನಿರ್ದೇಶನ ಕೊಟ್ಟು ಹತ್ತು ದಿವಸವಾಗಿದೆ. ಒಂದು ದಿವಸಕ್ಕೆ 5 ಸಾವಿರ ಟನ್ ಅರೆಯಬೇಕು. 5 ಸಾವಿನ ಟನ್ ಕಬ್ಬನ್ನು ಒಂದು ದಿವಸವೂ ಅವರು ಅರೆದಿಲ್ಲ. ಕಾರಣ ಏನೆಂದರೆ ಇವತ್ತು ನಿಮ್ಮ ಕೈಯಲ್ಲಿ ಖಾಸಗಿ ಕಾರ್ಖಾನೆಗಳವರನ್ನು ಬಿಗಿಯಾಗಿ ಇಟ್ಟುಕೊಳ್ಳದೇ ಹೋದರೆ ರೈತರಿಗೂ ಅವರು ಬಹಳ ಮೋಸ ಮಾಡುತ್ತಾರೆ. ನಾನು ಮೂರು ಸಲಹೆಗಳನ್ನು ಕೊಡುತ್ತೇನೆ. ಮೊದಲನೆಯದು ನೋಟಿಫೈಡ್ ಏರಿಯಾ ನಿರ್ಬಂಧವನ್ನು ತೆಗೆದುಹಾಕಬೇಕು. ಎರಡನೆಯದು, ಕಾರ್ಖಾನೆಗಳಿಗೆ ನಾವು ನೀರು ಕೊಡುತ್ತೇವೆ. ಕಾರ್ಖಾನೆಯವರಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ. ಕಾರ್ಖಾನೆಯವರಿಗೆ ಬೇಕಾದಷ್ಟು ಸಹಾಯ ಮಾಡುತ್ತೇವೆ. ಕಾರ್ಖಾನೆಯವರಿಗೆ ಕಮರ್ಷಿಯಲ್ ಟ್ಯಾಕ್ಸ್ ಕನ್‌ಸೆಕ್ಷನ್ ಕೊಟ್ಟಿದ್ದೇವೆ. ಕಾರ್ಖಾನೆಯವರಿಗೆ ಲೈಸೆನ್ಸ್ ಕೊಟ್ಟಿದ್ದೇವೆ. ಆದರೆ ನಮ್ಮ ಮಾತು ಕಾರ್ಖಾನೆಯವರು ಕೇಳುವುದಿಲ್ಲ. ಆ ಕಾರ್ಖಾನೆಯವರು ಕರ್ನಾಟಕದಲ್ಲಿದ್ದಾರಾ, ಎಲ್ಲಿದ್ದಾರೆ ಅವರು? ನೀವೇನಾದರೂ ಕ್ರಮ ತೆಗೆದುಕೊಳ್ಳದೇ ಹೋದರೆ ನಾವೇ ಜನಗಳನ್ನು ಕರೆದುಕೊಂಡು ಹೋಗಿ ನಿಂತುಕೊಂಡು ಕಾರ್ಖಾನೆ ಬಾಗಿಲು ಮುಚ್ಚಿಸುತ್ತೇವೆ. ಇನ್ನು ಒಂದು ವಾರ ಟೈಮ್ ಅಷ್ಟೇ ನಿಮಗೆ. ಸರ್ಕಾರ ಮಾಡಲಿಲ್ಲ ಅಂದರೆ ಬಹಳ ಬೇಜಾರಾಗಿದೆ. ಇಷ್ಟೆಲ್ಲಾ ಹೇಳಿದರೂ ಸರ್ಕಾರ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ ಈ ಮೂರು ಕಾರ್ಖಾನೆಗಳ ಭಾಗದ ರೈತರು ನಮ್ಮ ಮನೆ ಮುಂದೆ ಕಬ್ಬು ತೆಗೆದುಕೊಂಡು ಬಂದು ಹಾಕುವಂಥ ಪ್ರಸಂಗ ಬಂದಿದೆ. ಸಿದ್ದನಗೌಡರು ಪದೇ ಪದೇ ಪಾಪ ಕಾರ್ಖಾನೆಯವರಿಗೆ ಹೇಳುತ್ತಾರೆ. ಇಷ್ಟು ಹೇಳಿದರೂ ಅವರು ಕೇಳುವುದಿಲ್ಲ. ಇಲ್ಲದೇ ಇದ್ದರೆ ಕಾರ್ಖಾನೆಯನ್ನು ನನಗೆ ವಹಿಸಲಿ, ನಡೆಸುತ್ತೇನೆ ನಾನು. ಚೀಫ್ ಮಿನಿಸ್ಟರ್ ಮುಂದೆ ಹೇಳಿದೆ ನನಗೆ ಆ ಕಾರ್ಖಾನೆ ವಹಿಸಿ ನಾನು ನಡೆಸಿಕೊಡುತ್ತೇನೆ ಎಂದು. ಮಂಡ್ಯ ಜಿಲ್ಲೆಯ ರೈತರ ರಕ್ಷಣೆ ಮಾಡುತ್ತೇನೆ, ಮಂಡ್ಯ ಜಿಲ್ಲೆಯ ಕಬ್ಬು ಅರೆಯುತ್ತೇನೆ ಎಂದು.

ಇವತ್ತು 5 ಕಾರ್ಖಾನೆಗಳಿಗೆ ಹಿರಿಯೂರಿನಲ್ಲಿ ಶಾರ್ಟೇಜ್ ಇದೆ. ಗೌರೀಬಿದನೂರಿನಲ್ಲಿ ಶಾರ್ಟೇಜ್ ಇದೆ. ನಂಜನಗೂಡಿಗೆ ಶಾರ್ಟೇಜ್ ಇದೆ. ಏತಕ್ಕೆ ಅವರನ್ನೆಲ್ಲಾ ಕರೆಸಿ ಕಟ್ಟುನಿಟ್ಟಾಗಿ ಹೇಳಬಾರದು? ಖಂಡಿತವಾಗಿ ರೇಟ್ ಕಡಿಮೆ ಕೊಡಿ. ನಾವು ರೈತರನ್ನು ಒಪ್ಪಿಸುತ್ತೇವೆ. ಸಾಗಾಣಿಕೆ ವೆಚ್ಚ ಸರ್ಕಾರದವರು ಸ್ವಲ್ಪ ಕೊಡಿ. ಮಿಕ್ಕ ಸಾಗಾಣಿಕೆ ವೆಚ್ಚ ರೈತರು ಕೊಡುತ್ತಾರೆ. ಕನಿಷ್ಠ ಬೆಲೆಯನ್ನು ರೈತರಿಗೆ ಕೊಡಿ ಸ್ವಾಮಿ. 400

ಕೋಟಿ ರೂಪಾಯಿನಷ್ಟು ಕಬ್ಬು ಮಂಡ್ಯ ಜಿಲ್ಲೆಯಲ್ಲಿ ಒಣಗುತ್ತಿದೆ. ನಾವು ಯಾರಿಗೆ ಮುಖ ತೋರಿಸಬೇಕು ಎಂದು ನಮಗೆ ಅರ್ಥವಾಗುತ್ತಿಲ್ಲ, ಸರ್ಕಾರ ಖಾಸಗಿ ಕಾರ್ಖಾನೆಯವರನ್ನು ಬಗ್ಗಿಸದೇಹೋದರೆ ಬಹಳ ಕಷ್ಟವಾಗುತ್ತದೆ ಎಂದು ಬಹಳ ಕಟುವಾಗಿಯೇ ಈ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ತಾವು ಇವತ್ತು ಸಾಯಂಕಾಲವೇ ಒಂದು ಸಭೆಯನ್ನು ಕರೆಯಿರಿ. ಖಾಸಗಿ ಕಾರ್ಖಾನೆಯವರನ್ನೂ ಕರೆಯಿರಿ. ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಅವರು ನಿಮ್ಮ ಮನೆಗೆ ಬರುತ್ತಾರೆ, ಟ್ಯಾಕ್ಸ್ ವೇವ್ ಮಾಡಿಸಿಕೊಳ್ಳುವುದಕ್ಕೆ ನಿಮ್ಮ ಮನೆಗೆ ಬರುತ್ತಾರೆ, ಕರೆಂಟ್ ಇಲ್ಲದೇ ಹೋದರೆ ನಿಮ್ಮ ಮನೆಗೆ ಬರುತ್ತಾರೆ, ನೀರು ಬಿಡದೇ ಹೋದರೆ ಇಂಜಿನಿಯರ್ ಮನೆಗೆ ಹೋಗುತ್ತಾರೆ, ನೀರಾವರಿ ಮಂತ್ರಿ ಕಡೆ ಬರುತ್ತಾರೆ. ಆದರೆ ಕಬ್ಬು ತೆಗೆದುಕೊಳ್ಳುವುದಕ್ಕೆ ನಿಮ್ಮ ಹತ್ತಿರ ಬರುವುದಿಲ್ಲವಲ್ಲ, ಏತಕ್ಕೆ ಹೀಗೆ ನಡೆಸುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಇದು ಬಹಳ ಸೀರಿಯಸ್ಸಾಗಿದೆ. ನಮ್ಮ ಜಿಲ್ಲೆಯಲ್ಲಿ ಖಂಡಿತವಾಗಿಯೂ ಬಹಳ ಸಂಕಷ್ಟವಾಗಿದೆ. ಶ್ರೀಮತಿ ವಿಜಯಲಕ್ಷ್ಮಿ ಅವರು ಹೇಳಿದ ಹಾಗೆ ರೈತರು ಇವತ್ತು ನಾಳೆಯೊಳಗೆ ಕಬ್ಬನ್ನು ತಂದು ನಮ್ಮ ಮನೆ ಮುಂದೆ ಹಾಕುತ್ತಾರೆ. ನಮ್ಮ ಮನೆ ಮುಂದೆ ಹಾಕಿದರೆ ಆ ಕಬ್ಬನ್ನು ನಾವು ತೆಗೆದುಕೊಂಡು ಹೋಗಿ ಆ ಸಕ್ಕರೆ ಕಾರ್ಖಾನೆ ಮಾಲೀಕರ ಮನೆ ಮುಂದೆ ಹಾಕಬೇಕಾದ ಪ್ರಸಂಗ ಬರುತ್ತದೆ. ದಯವಿಟ್ಟು ತಾವು ಅದಕ್ಕೆ ಅವಕಾಶ ಕೊಡಕೂಡದು. ನಮಗೆ ಕಡಿಮೆ ರೇಟ್ ಕೊಡಿ, ನಾವು ಒಪ್ಪಿಸುತ್ತೇವೆ. ಸಾಗಾಣಿಕೆ ವೆಚ್ಚ ಕಡಿಮೆ ಕೊಡಿ, ನಾವು ಒಪ್ಪಿಸುತ್ತೇವೆ. ಸರ್ಕಾರ ಸ್ವಲ್ಪ ಭರಿಸಲಿ, ನಾವು ಒಪ್ಪಿಸುತ್ತೇವೆ. ಜೊತೆಗೆ ಶಿವರಾಮೇಗೌಡರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಎತ್ತಿದರು. ಹತ್ತು ಕಾರ್ಖಾನೆಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಹತ್ತು ಸಕ್ಕರೆ ಕಾರ್ಖಾನೆಗೆ ಲೆಟರ್ ಆಫ್ ಇಂಡೆಂಟ್ ಕೊಡಿ ಎಂದು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ವೀರಪ್ಪಮೊಯಿಲಿ ಅವರು ಇಲ್ಲೇ ಇದ್ದಾರೆ. ಅವರು ದಯವಿಟ್ಟು....

+ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) : ಇದು ರಾಜ್ಯಾದ್ಯಂತ ಇರತಕ್ಕ ಬಹಳ ಗಂಭೀರವಾದ ಸಮಸ್ಯೆ. ಮಂಡ್ಯ ಇರಬಹುದು, ಶಿವಮೊಗ್ಗ ಏರಿಯಾ ಇರಬಹುದು, ಬೆಳಗಾಂ ಏರಿಯಾ ಇರಬಹುದು ಅಥವಾ ಹಾವೇರಿ ಸಕ್ಕರೆ ಕಾರ್ಖಾನೆ ಇರಬಹುದು, ಮಂಗಳೂರು ಇರಬಹುದು ಇಲ್ಲಿ ಏನಾಗಿದೆ? ಒಟ್ಟು ನಮ್ಮಲ್ಲಿಯ ಕ್ರಷಿಂಗ್ ಕೆಪಾಸಿಟಿಯ ಎರಡೂವರೆ ಪಟ್ಟು ಹೆಚ್ಚು ಕಬ್ಬು ಬೆಳೆಯುತ್ತಿದ್ದಾರೆ. ಮೊದಲು ಏನು ರಿಸ್ಟ್ರಿಕ್ಷನ್ಸ್ ಇತ್ತು ಅದು ಮಾನ್ಯ ನಾಗೇಗೌಡರು ಹೇಳಿದ ಹಾಗೆ ಇಂಡಸ್ಟ್ರೀಸ್ ಸೇವ್ ಮಾಡುವುದಕ್ಕೋಸ್ಕರ ಒಪ್ಪಿಗೆ ಕಬ್ಬನ್ನು ಆ ಏರಿಯಾ ಬಿಟ್ಟು ಬೇರೆ ಕಡೆ ಕೊಡಕೂಡದು ಎಂದು ಒಂದು ರಿಸ್ಟ್ರಿಕ್ಷನ್ಸ್ ಮಾಡಿದ್ದರು. ಈಗ ಕಾರ್ಖಾನೆಗೆ ಅರೆಯುವ ಶಕ್ತಿ ಇಲ್ಲ, ಹಿರಿಯೂರಿನಲ್ಲಿ ನೀರಾವರಿ ಸೌಲಭ್ಯ ಇಲ್ಲದಿರುವ ಕಡೆ ಅದಕ್ಕೆ ಪರ್ಮಿಷನ್ ಕೊಟ್ಟರು. ಈಗ ಬೇರೆ ಕಡೆಯಿಂದ ಕಬ್ಬು ಹೋಗದೇ ಇದ್ದರೆ ಕಾರ್ಖಾನೆ ನಡೆಯುವುದಿಲ್ಲ, ಹಾವೇರಿ ಹತ್ತಿರ ಇರುವ ಕಾರ್ಖಾನೆಯೂ ಅಷ್ಟೆ ಮಂಗಳೂರಿನ ಹತ್ತಿರ ಇರುವ ಕಾರ್ಖಾನೆಯೂ ಅಷ್ಟೆ. ಅದಕ್ಕೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಸಕ್ಕರೆಗೆ ಸಂಬಂಧಪಟ್ಟ ಮಂತ್ರಿಗಳು, ಷುಗರ್ ಡೈರೆಕ್ಟರ್, ಆಮೇಲೆ ಆಯಾ ಜಿಲ್ಲೆಯಲ್ಲಿರತಕ್ಕ ಕಾರ್ಖಾನೆಗಳ ಮ್ಯಾನೇಜ್‌ಮೆಂಟಿನಲ್ಲಿರತಕ್ಕವರು ಇವರದೆಲ್ಲಾ ಸಭೆ ಕರೆದು ಯಾವ ಪ್ರದೇಶದಲ್ಲಿ ಎಷ್ಟು ಕಬ್ಬು ಅಬ್ಸಾರ್ಬ್ ಮಾಡಬೇಕು ಎಂದು ನೋಡೋಣ. ಸೋಮಶೇಖರ್ ಅವರ ಏರಿಯಾದಿಂದ ತಮಿಳುನಾಡಿಗೂ ಕಬ್ಬು ಹೋಗಿದೆ ನಾನು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ. ಆದ್ದರಿಂದ ಇಲ್ಲಿ ಬರುವ ಪ್ರಶ್ನೆ ಏನೆಂದರೆ ರೈತರು ಟ್ರಾನ್ಸ್‌ಪೋರ್ಟೇಷನ್ ಕೊಡಿ ಎಂದು ಕೇಳುತ್ತಾರೆ. ನಾವು ಏನಾದರೂ ಅದಕ್ಕೆ ಒಪ್ಪಿಗೆ ಕೊಟ್ಟರೆ ಕಷ್ಟವಾಗುತ್ತದೆ ಟ್ರಾನ್‌ಪೋರ್ಟೇಷನ್ ಛಾರ್ಜ್ ನಾವು ಕೊಡುವುದಕ್ಕೆ. ಆದರೆ ಪರ್ಮಿಷನ್

ಕೊಡಿಸಬಹುದು ಅಥವಾ ಇನ್ನು ಯಾವುದಾದರೂ ಸಣ್ಣ ಪುಟ್ಟ ಬೆನಿಫಿಟ್ ಕೊಡಿಸಬಹುದು. ರೈತರ ಅನುಕೂಲಕ್ಕೋಸ್ಕರ ನಿಯಮಗಳನ್ನು ಏನು ಸಡಿಲ ಮಾಡಬಹುದೋ ಅದನ್ನು ಮಾಡಬಹುದು. ಆದ್ದರಿಂದ ಸರ್ಕಾರ ಒಂದು ವಾರದೊಳಗೆ ಸಭೆ ಕರೆದು ಸಂಬಂಧಪಟ್ಟ ಎಲ್ಲರನ್ನೂ ಕರೆದು ಮಂತ್ರಿಗಳು ನಾನು ಎಲ್ಲಾ ಸೇರಿ ಯಾವ ಯಾವ ಏರಿಯಾದಲ್ಲಿ ರೈತರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬಹುದು ಎಂಬ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ.

ಉ) ಇಳಕಲ್‌ನಲ್ಲಿ ಗ್ರಾನೈಟ್ ಲೂಟಿ

+ ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ಈಗತಾನೇ ಅಂದರೆ ಹೋದವಾರ ಗಣಿ ಲೂಟಿ ಬಗ್ಗೆ ನೋಡುವುದಕ್ಕೆ ನೇಮಕ ಆಗಿದೆ. ಆದರೂ ಜೆ.ಹೆಚ್. ಪಟೇಲರಿಗೆ ಸಿಟ್ಟು ಬರಬಹುದು ಆಶ್ಚರ್ಯವೂ ಆಗಬಹುದು. ಏನಪ್ಪ, ನಂಜೇಗೌಡರಂಥವರು ಸದನ ಸಮಿತಿ ಗಣಿ ಲೂಟಿ ಬಗ್ಗೆ ರಚನೆಯಾಗಿದ್ದರೂ ಈ ವಿಚಾರ ಎತ್ತುತ್ತಾರಲ್ಲ ಎಂದು. ಅದು ಪ್ರಸ್ತಾವ. ನಾನು ಎತ್ತಬೇಕಾದರೆ ಕಾರಣ ಅಧ್ಯಕ್ಷರೆ, ಇಳಕಲ್ ಗ್ರಾನೈಟ್ ಲೂಟಿಗೆ ಸಂಬಂಧಪಟ್ಟಹಾಗೆ ಅನೇಕ ವಿಚಾರಗಳು ಬಂದವು. ಮೊದಲು ಬಂದಿದ್ದು ಆಗಸ್ಟ್ 2ನೇ ತಾರೀಖು. ನಾಗೇಗೌಡರೇ, ತಮ್ಮ ಗಮನಕ್ಕೆ ಇದು ಬಂದಿದೆಯೋ ಅಥವ ಇಲ್ಲವೋ ಗೊತ್ತಿಲ್ಲ. ಏಕೆಂದರೆ ತಾವು ಆ ಕಮಿಟಿಯಲ್ಲಿದ್ದೀರಿ. ಆಗಸ್ಟ್ 2ಕ್ಕೆ ಒಂದು ಹೇಳಿಕೆ ಬಂತು ಮುಖ್ಯಮಂತ್ರಿಗಳದು. ಅದು ಇಳಕಲ್ ಗ್ರಾನೈಟ್ ಬಗ್ಗೆ ಅದು ಜೆಮ್ಸ್ ಗ್ರಾನೈಟ್ ಬಗ್ಗೆ ಅವರು ಹೇಳುತ್ತಾರೆ; ಪತ್ರಿಕೆಯವರು ಕೇಳುತ್ತಾರೆ, "ಏನು ಸ್ವಾಮಿ, ನಿಮ್ಮ ಪಕ್ಷದ ಮುಖಂಡರ ಫೋಟೋ ಇಟ್ಟುಕೊಂಡು ಅವನು ವ್ಯವಹಾರ ಮಾಡುತ್ತಾನೆ" ಎಂದು. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, "ಮುಖಂಡರ ಫೋಟೋ ಅಲ್ಲ, ಪರಮಾತ್ಮನ ಫೋಟೋ ಇಟ್ಟುಕೊಂಡರೂ ಅವನನ್ನು ಬಲಿ ಹಾಕುತ್ತೇನೆ" ಎಂದು. ಇದನ್ನು ಓದಿದೆವು, ಸುಮ್ಮನಾದೆವು, ಏನೋ ಇರಬಹುದೇನೋ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಅಂತ.

11.40 ಎ.ಎಂ.

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೆ ತಾವು ಆಗಲೇ ಒಂದು ಡೈರೆಕ್ಷನ್ ಕೊಟ್ಟಿದ್ದೀರಿ ಈಗಾಗಲೇ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಮಿಟಿ ಇದೆ. ಈಗ ತಾವು ಪುನಃ ಪ್ರಸ್ತಾಪ ಮಾಡುವುದಕ್ಕೆ ವಿಶೇಷ ಕಾರಣ ಏನು?

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಮೊದಲೇ ಹೇಳಿದ್ದೇನೆ. ನಾನು ತಪ್ಪು ಮಾಡುತ್ತಿದ್ದೇನೆಂದು ಅವರಿಗೆ ಅನ್ನಿಸಬಹುದೆಂದು. ಅದು ನನ್ನದೇ ಒಂದು ರೀತಿಯ ಭಾಷಣ. ನೀವು ಮಾತನಾಡುವ ಹಾಗೆ ಮಾಡುವುದಕ್ಕೆ ನನಗೆ ಬರುವುದಿಲ್ಲವಲ್ಲ. ಅದು ಏನಾಯಿತು ಎಂದರೆ, ಇದು ಏನೋ ಬಗೆಹರಿಯುತ್ತದೆ ಇವರು ಬಲಿಹಾಕುತ್ತಾರೆ. ಮುಖ್ಯಮಂತ್ರಿಗಳೇ ಅಷ್ಟು ಹೇಳಿದ ಮೇಲೆ, ಅದು ಹೇಳಿದ್ದು ನಿಮ್ಮ ಪಕ್ಷದವರು ಫೋಟೋ ಇಟ್ಟುಕೊಂಡು ಅವರು ವ್ಯವಹಾರ ಮಾಡುತ್ತಾ ಇದ್ದಾರೆ ಎಂದು. ಇವರು ಹೇಳಿದರು, ಅವರು ಪರಮಾತ್ಮನ ಫೋಟೋ ಇಟ್ಟುಕೊಂಡರೂ ಬಲಿಹಾಕುತ್ತೇವೆಂದು. ಬಲಿಹಾಕಿರಬೇಕೆಂದು ಅಂದುಕೊಂಡೆವು. ಪುನಃ ೮ನೇ ತಾರೀಖಿನಂದು ಪತ್ರಿಕೆಯಲ್ಲಿ ಬಂತು. ನೀವು ಹೇಳುವ ಪರಮಾತ್ಮನ ಫೋಟೋ ಇಡುವುದಕ್ಕಾಗುವುದಿಲ್ಲ, ಆ ಪರಮಾತ್ಮನನ್ನು ಬಂದೋಬಸ್ತಾಗಿ ಗ್ಲಾಸ್‌ನಲ್ಲಿ ಹಾಕಿ ಇಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ನಂಜೇಗೌಡರೆ, ಪರಮಾತ್ಮ ಎಂದು ಹೇಳಿದರೆ ಎರಡು ಅರ್ಥ ಆಗುತ್ತದೆ. ಆದರೆ ನೀವು ನನಗೆ ಹೇಳಬಹುದು, ನಮಗೆ